**ದಿನಾಂಕ:20-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರಃ ಎಂಬಿಆರ್. ವಕೀಲರಿಂದಃ**

ಸ.ನಂ.7 ರಲ್ಲಿ ಒಟ್ಟು 4 ಎಕರೆ 19 ಗುಂಟೆ ಜಮೀನು ಇತ್ತು. ಮೂಲತಃ ಇದು ಈರಣ್ಣನವರಿಗೆ ಸಂಬಂಧಪಟ್ಟಿತ್ತು. ಈರಣ್ಣ ನನ್ನ ತಂದೆ. ನಂಜಪ್ಪ ಮತ್ತು ಚೆನ್ನಬಸಪ್ಪರವರು ನನ್ನ ತಂದೆಯ ತಮ್ಮಂದಿರು. 1986 ರಲ್ಲಿ ನನ್ನ ತಂದೆ ನಂಜಪ್ಪ ಮತ್ತು ಚೆನ್ನಬಸಪ್ಪನವರ ಮಧ್ಯೆ ವಿಭಾಗ ಆಗಿತ್ತು. ಈರಣ್ಣನಿಗೆ 5 ಜನ ಮಕ್ಕಳು. 1 ಮತ್ತು 2 ನೇ ಪ್ರತಿವಾದಿಗಳಿಗೆ ನನ್ನ ತಂದೆ ಈರಣ್ಣ 30 ಗುಂಟೆ ಜಮೀನನ್ನು ಮಾರಿದ್ದರು. 1 ಮತ್ತು 2 ನೇ ಪ್ರತಿವಾದಿಗಳಿಗೆ ಯಾರು ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳಿಗೆ ಸಂಬಂಧಿಸಿದ 30 ಗುಂಟೆ ಜಮೀನಿನ ದಾಖಲೆಗಳನ್ನು ನಾನು ನೋಡಿಲ್ಲ. 1986 ಕ್ಕಿಂತ ಮೊದಲು ಚನ್ನೇಗೌಡರು 1 ಮತ್ತು 2 ನೇ ಪ್ರತಿವಾದಿಗಳ ತಂದೆಗೆ 30 ಗುಂಟೆ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ಸರಿ. ಜಮೀನನ್ನು ಮಾರಾಟ ಮಾಡುವಾಗ 30 ಗುಂಟೆ ಜಮೀನನ್ನು ಗುರುತಿಸಿ,ಅಳತೆ ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ, ಹೇಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ, ನಂಜಪ್ಪ ಮತ್ತು ಚನ್ನಬಸಪ್ಪನವರಿಗೆ ತಲಾ 1 ಎಕರೆ 3 ಗುಂಟೆ ಜಮೀನು ಬಂದಿದೆ ಎಂದು ಅಂದಾಜಿನಲ್ಲಿ ಸದರಿ ಜಮೀನನ್ನು ತೋರಿಸಿರುತ್ತಾರೆ. ನಾವು ತಲಾ 1 ಎಕರೆ 3 ಗುಂಟೆ ಜಮೀನನ್ನು ಪಾಲಿನಲ್ಲಿ ತೆಗೆದುಕೊಳ್ಳುವ ಮೊದಲೇ 1 ಮತ್ತು 2 ನೇ ಪ್ರತಿವಾದಿಗಳ ತಂದೆಯು 30 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದರು ಎಂದರೆ ಸರಿ. ನಾವು ಸ್ವಾಧೀನ ತೆಗೆದುಕೊಳ್ಳುವ ಮೊದಲು 1 ಮತ್ತು 2 ನೇ ಪ್ರತಿವಾದಿಗಳು ಇಷ್ಟು ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ಅಳತೆಮಾಡಿಸಿರುವುದಿಲ್ಲ. 1986 ಕ್ಕಿಂತ ಮೊದಲು 1 ಮತ್ತು 2 ನೇ ಪ್ರತಿವಾದಿಗಳಿಗೆ ಯಾವ ಸ್ವತ್ತನ್ನು ಕ್ರಯಕ್ಕೆ ಕೊಡಲಾಗಿತ್ತೋ ಆ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ.ಸ.ನಂ.7 ರ ಸ್ವತ್ತು ಈಗ 6 ಭಾಗಗಳಾಗಿರುತ್ತದೆ. ಹಾಲಪ್ಪರವರಿಗೆ 1 ಎಕರೆ 3 ಗುಂಟೆ, ಮಲ್ಲಿಕಾರ್ಜುನರವರಿಗೆ 1 ಎಕರೆ 3 ಗುಂಟೆ, ಉಮೇಶರವರಿಗೆ 1 ಎಕರೆ 3 ಗುಂಟೆ, ಶಿವಪ್ಪರವರಿಗೆ 15 ಗುಂಟೆ, ಮಲ್ಲಿಕಾರ್ಜುನರವರಿಗೆ 15 ಗುಂಟೆ, ಮರಳುಸಿದ್ಧಪ್ಪನವರಿಗೆ 20 ಗುಂಟೆ ಹೋಗಿರುತ್ತದೆ. ಬಿ.ಎಂ. ಚಂದ್ರಶೇಖರ ಎಂದರೆ, ಮಲ್ಲಿಕಾರ್ಜುನರವರ ಚಿಕ್ಕಪ್ಪನ ಮಗ. ಚಿದಾನಂದರವರು ಮಲ್ಲಿಕಾರ್ಜುನರವರ ಚಿಕ್ಕಪ್ಪನ ಮಗ. ಚಂದ್ರಶೇಖರ ಮತ್ತು ಚಿದಾನಂದರವರಿಗೆ ಸ.ನಂ.7 ರಲ್ಲಿ ಸ್ವತ್ತು ಇದೆ ಎಂದರೆ, 1 ಎಕರೆ 3 ಗುಂಟೆಯಲ್ಲಿ ಅವರೂ ಸಹಾ ಸ್ವಾಧೀನದಲ್ಲಿ ಇರುತ್ತಾರೆ. ಬಿ.ಎನ್. ಚಂದ್ರಶೇಖರ,

ಚಿದಾನಂದರವರ ಸ್ವತ್ತು ನನ್ನ ಸ್ವತ್ತಿನ ದಕ್ಷಿಣ ದಿಕ್ಕಿನ ಕಡೆಗೆ ಇರುತ್ತವೆ. ನಮ್ಮ ಸ್ವತ್ತಿನ ಬದುವಿನ ಪಕ್ಕದಲ್ಲಿ ಚಿದಾನಂದರವರ ಸ್ವತ್ತು ಇರುತ್ತದೆ ಎಂದರೆ ಸರಿ. ನನ್ನ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಉಮೇಶರವರ ಸ್ವತ್ತು ಇರುತ್ತದೆ, ಪೂರ್ವಕ್ಕೆ ತೀರ್ಥಮಲ್ಲಕ್ಕರವರ ಸ್ವತ್ತು ಇದ್ದು ಇವರು ನಮ್ಮ ಊರಿನವರಾಗಿರುತ್ತಾರೆ. ತೀರ್ಥಮಲ್ಲಪ್ಪನಿಗೆ ಎಷ್ಟು ವಿಸ್ತೀರ್ಣದ ಸ್ವತ್ತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಿದಾನಂದ, ಉಮೇಶ, ಚಂದ್ರಶೇಖರ ಮತ್ತು ಮಲ್ಲಿಕಾರ್ಜುನರವರು ಎಷ್ಟೆಷ್ಟು ವಿಸ್ತೀರ್ಣದ ಸ್ವತ್ತಿನಲ್ಲಿ ಸ್ವಾದೀನ ಇದ್ದಾರೆ ಎಂದು ನಾನು ಅಳತೆ ಮಾಡಿಸಿಲ್ಲ. 1 ಮತ್ತು 2 ನೇ ಪ್ರತಿವಾದಿಗಳುಎಷ್ಟು ವಿಸ್ತೀರ್ಣದ ಸ್ವತ್ತಿನಲ್ಲಿ ಸ್ವಾದೀನ ಇದ್ದಾರೆ ಎಂದು ನಾನು ಅಳತೆ ಮಾಡಿಸಿಲ್ಲ. ಸ.ನಂ.7 ರಲ್ಲಿ 3 ನೇ ಪ್ರತಿವಾದಿಯ ಸ್ವತ್ತು ಇರುವುದರಿಂದ ಅವರನ್ನೂ ಸಹಾ ಪಕ್ಷಗಾರರನ್ನಾಗಿ ಮಾಡಿದ್ದೇನೆ. 3 ನೇ ಪ್ರತಿವಾದಿಯು ತಮ್ಮ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದು ಅದನ್ನು ನಾನು ಅಳತೆ ಮಾಡಿಸಿಲ್ಲ.ಸ.ನಂ.7 ರ ಸ್ವತ್ತಿನಲ್ಲಿ ಚಿದಾನಂದ, ಉಮೇಶ, ಚಂದ್ರಶೇಖರ ಮತ್ತು ಮಲ್ಲಿಕಾರ್ಜುನರವರು ಸಹಾ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ನಮ್ಮ ಚಿಕ್ಕಪ್ಪನ ಮಕ್ಕಳಾಗಿರುವುರಿಂದ ಚಿದಾನಂದ, ಉಮೇಶ, ಚಂದ್ರಶೇಖರ ಮತ್ತು ಮಲ್ಲಿಕಾರ್ಜುನರವರನ್ನು ಈ ದಾವೆಗೆ ಸೇರಿಸಿಲ್ಲ. ಸ್ವತ್ತು ಒತ್ತುವರಿಯಾಗಿದೆ ಎಂದು ಈ ದಾವೆಯನ್ನು ಹಾಕಿದ್ದೇವೆ. ಯಾರಿಂದ ಎಷ್ಟು ವಿಸ್ತೀರ್ಣದ ಜಮೀನು ಒತ್ತುವರಿಯಾಗಿದೆ ಎಂದು ದಾವೆಯಲ್ಲಿ ಹೇಳಿರುತ್ತೇನೆ. ಚಿದಾನಂದ, ಚಂದ್ರಶೇಖರ ಮತ್ತು ಮಲ್ಲಿಕಾರ್ಜುನರವರು ನಮ್ಮ ಜಮೀನನ ಒತ್ತುವರಿ ಮಾಡಿಕೊಂಡಿಲ್ಲ. ಸರ್ವೆ ಮಾಡಿಸಿದ್ದರಿಂದ ಇವರು ಒತ್ತುವರಿ ಮಾಡಿಲ್ಲ ಎಂದು ಗೊತ್ತಾಗುತ್ತದೆ, ಈ ಬಗ್ಗೆ ದಾಖಲೆ ಹಾಜರುಪಡಿಸಿದ್ದೆ;ನೆ. 1 ರಿಂದ 3 ನೇ ಪ್ರತಿವಾದಿಗಳು ಯಾವ ದಿಕ್ಕಿನಲ್ಲಿ ಎಷ್ಟು ಭೂಮಿಯನ್ನು ಒತ್ತವರಿ ಮಾಡಿಕೊಂಡಿದ್ದಾರೆ ಎಂದರೆ, ಆ ರೀತಿ ತೋರಿಸಲು ಆಗುವುದಿಲ್ಲ. ನನ್ನ ಜಮೀನಿನಲ್ಲಿ ದಕ್ಷಿಣ ದಿಕ್ಕಿನಲ್ಲಿ 11 ಗುಂಟೆ ಒತ್ತುವರಿಯಾಗಿರುತ್ತದೆ. 2019 ರಲ್ಲಿ ಸರ್ಕಾರದಿಂದ ಪೋಡಿ ಮುಕ್ತ ಅಭಿಯಾನ ಮಾಡುವಾಗ ಒತ್ತುವರಿಯಾಗಿರುವ ವಿಚಾರ ಗೊತ್ತಾಗಿರುತ್ತದೆ. ಪೋಡಿ ಮಾಡಲು ನಾನು ಅರ್ಜಿಕೊಟ್ಟಿರುವುದಿಲ್ಲ ಅವರೇ ಬಂದು ಪೋಡಿ ಮಾಡಿರುತ್ತಾರೆ. ಪೋಡಿ ಮುಕ್ತ ಅಭಿಯಾನದಲ್ಲಿ ಅಳತೆ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನಾನು ಸರ್ವೆ ಮಾಡಲು ಅರ್ಜಿ ಕೊಟ್ಟ ಬಗ್ಗೆ ಮತ್ತು ಸರ್ವೆ ಮಾಡಿದ ಬಗ್ಗ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸರ್ವೆ ಸ್ಕೆಚ್ ಆಧಾರದ ಮೇಲೆ ದಾವೆಯ ಬಿ ಷೆಡ್ಯೂಲ್ ಸ್ವತ್ತು ಒತ್ತುವರಿಯಾಗಿದೆ ಎಂದು ಹೇಳುತ್ತಿದ್ದೇನೆ. ನಾನು ಹಾಜರುಪಡಿಸಿದ ದಾಖಲೆಯಲ್ಲಿ ಸರ್ವೆ ಮಾಡಲು ನಾನು ಅರ್ಜಿ ಕೊಟ್ಟ ಬಗ್ಗೆ ಮತ್ತು

ಸರ್ವೆ ಮಾಡಿದ ಬಗ್ಗೆ ನಮೂದು ಇರುತ್ತದೆ.  2019 ರಲ್ಲಿ ಸರ್ವೆ ಮಾಡಿದ್ದು, 2020 ರಲ್ಲಿ ಸರ್ವೆ ಸ್ಕೆಚ್ ಅನ್ನು ಪಡೆದುಕೊಂಡಿರುತ್ತೇನೆ. ಸರ್ವೆಗೆ ಅರ್ಜಿ ಕೊಟ್ಟಿದ್ದರೆ ಮತ್ತು ಸರ್ವೆ ಮಾಡಿದ್ದರೆ, ಆ ದಾಖಲೆಯಲ್ಲಿ ಉಲ್ಲೇಖ ಇರುತ್ತದೆ ಎಂದರೆ ಸರಿ. ಸರ್ವೆ ಇಲಾಖೆಗೆ ಅರ್ಜಿ ಕೊಟ್ಟಿದ್ದೆ. ನಿಪಿ-29 ರಲ್ಲಿ ಯಾವ ಇಲಾಖೆ ಎಂಬ ಬಗ್ಗೆ ಸೀಲು ಮತ್ತು ಸಹಿ ಇರುವುದಿಲ್ಲ. ನಿಪಿ-29 ಸರ್ವೆ ಇಲಾಖೆಯವರು ನೀಡಿರುವುದಲ್ಲ ಇದನ್ನು ನಾವೇ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.